| ಕರ್ನಾಟಕ | | ಕಳೆದ ವಾರದ ವಾಸ್ತವಿಕ ಮಳೆ (ಮಿ.ಮೀ) | | | | | ಮುಂದಿನ ವಾರದ ಮಳೆ ಮುನ್ಸೂಚನೆ (ಮಿ.ಮೀ) | | | | |
|---|---|---|---|---|---|---|---|---|---|---|---|
| | | ಡಿಸೆಂಬರ್ | | | | | ಡಿಸೆಂಬರ್ | | | | |
| | | 13 | 14 | 15 | 16 | 17 | 19 | 20 | 21 | 22 | 23 |
|  | ಧಾರವಾಡ | 0 | 0 | 0 | 0 | 0 | 0 | 0 | 0 | 0 | 0 |
| | ಹಾವೇರಿ | 0 | 0 | 0 | 0 | 0 | 0 | 0 | 0 | 0 | 0 |
| | ಮೈಸೂರು | 0 | 0 | 0 | 0 | 0 | 0 | 0.2 | 0.7 | 1.5 | 0.7 |
| ಒಟ್ಟು ಮಳೆ ಮತ್ತು ಬಣ್ಣದ ಸೂಚನೆ | | 0.1 ರಿಂದ 2.4 ಮಿ.ಮೀ | | 2.5 ರಿಂದ 15.5 ಮಿ.ಮೀ | | 15.6 ರಿಂದ 64.4 ಮಿ.ಮೀ | | 64.5 ರಿಂದ 115.5 ಮಿ.ಮೀ | | 115.6 ರಿಂದ 204.4 ಮಿ.ಮೀ | |
| ಮಳೆಯ ತೀವ್ರತೆ | | ತೀವ್ರ ಹಗುರವಾದ ಮಳೆ | | ಹಗುರವಾದ ಮಳೆ | | ಸಾಧಾರಣವಾದ ಮಳೆ | | ಉತ್ತಮವಾದ ಮಳೆ | | ಅಧಿಕವಾದ ಮಳೆ | |

**ಬೆಳೆಯ ಪರಿಸ್ಥಿತಿ**

**ಧಾರವಾಡ:** ಧಾರವಾಡ ಪ್ರದೇಶದಲ್ಲಿ ಹತ್ತಿ ಬೆಳೆಯು ಹತ್ತಿ ಬಿಡಿಸುವ ಹಂತದಲ್ಲಿದೆ. ಹತ್ತಿ ಬಿಡಿಸುವಿಕೆ ಕಾರ್ಯ ಪ್ರಗತಿಯಲ್ಲಿದೆ. ಮುಂದುವರೆದು ಬೆಳೆಯಲ್ಲಿ ರಸಹೀರುವ ಕೀಟಗಳಾದ ಹಸಿರು ಜಿಗಿಹುಳುಗಳ ಮತ್ತು ಎಫಿಡ್ ಹೇನುಗಳ ಬಾಧೆಯು ಮಾಧ್ಯಮದಿಂದ ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿದೆ. ಗುಲಾಬಿ ಕಾಯಿ ಕೊರಕವು ಕೆಲವು ತಾಕುಗಳಲ್ಲಿ ಅರ್ಥಿಕ ಮಟ್ಟ ರೇಖೆಗಿಂತ ಹೆಚ್ಚಾಗಿ 38 ರಿಂದ 43% ಪ್ರಮಾಣದಲ್ಲಿ ಕಂಡುಬಂದಿದೆ.

**ರಾಯಚೂರು:** ರಾಯಚೂರು ಭಾಗದಲ್ಲಿ ಹತ್ತಿ ಬೆಳೆಯು ಕಾಯಿ ಒಡೆಯುವ / ಹತ್ತಿ ಬಿಡಿಸುವ ಹಂತದಲ್ಲಿದೆ. ತಡವಾಗಿ ಬಿತ್ತನೆಯಾದ ತಾಕುಗಳಲ್ಲಿ ರಸಹೀರುವ ಕೀಟಗಳ ಬಾಧೆಯು ಮತ್ತು ಗುಲಾಬಿ ಕಾಯಿ ಕೊರಕವು ಕಂಡುಬಂದಿದೆ.

**ಚಾಮರಾಜನಗರ:** ಚಾಮರಾಜನಗರದಲ್ಲಿ ಹತ್ತಿ ಬೆಳೆಯನ್ನು ಪೂರ್ತಿ ಕಟಾವು ಮಾಡಲಾಗಿದೆ.

**ಸಲಹೆ:**

**ಧಾರವಾಡ:** ಧಾರವಾಡ ಜಿಲ್ಲೆಯಲ್ಲಿ ರಸಹೀರುವ ಕೀಟಗಳ ಹಾವಳಿಯು ಆರ್ಥಿಕ ಮಟ್ಟರೇಖೆಗಿಂತ ಹೆಚ್ಚಾದಲ್ಲಿ ಫ್ಲುನಿಕಆಮೈಡ್ 50 ಡಬ್ಲ್ಯು.ಜಿ 80 ಗ್ರಾಂ/ಎಕರೆಗೆ ಅಥವಾ ಡೈನೆಟೊಫ್ಯೂರನ್ 20% ಎಸ್.ಜಿ 60ಗ್ರಾಂ/ಎಕರೆಗೆ ಅಥವಾ ಇಮಿಡಾಕ್ಲೊಪ್ರಿಡ್ 17.8% ಎಸ್.ಎಲ್ 60 ಮಿ.ಲೀ/ಎಕರೆಗೆ ಅಥವಾ ಟೊಲ್‌ಫೆನ್‌ಪೈಡ್ 15% ಇಸಿ 400 ಮಿ.ಲೀ/ಎಕರೆಗೆ ಅಥವಾ ಫೆನ್‌ಪೈರಕ್ಷಿಮೆಟ್ 5% ಇಸಿ 300 ಮಿ.ಲೀ/ಎಕರೆಗೆ ಸಿಂಪಡಿಸಲು ಶಿಫಾರಸ್ಸು ಮಾಡಲಾಗಿದೆ. ಗುಲಾಬಿ ಕಾಯಿ ಕೋರಕದ ಹಾವಳಿಯು ಆರ್ಥಿಕ ಮಟ್ಟರೇಖೆಗಿಂತ ಹೆಚ್ಚಾದಲ್ಲಿ (ಸತತ 3 ದಿನಗಳವರೆಗೆ ಪ್ರತಿ ರಾತ್ರಿಗೆ 8 ಚಿಟ್ಟೆಗಳು ಅಥವಾ 10% ಹಸಿರು ಕಾಯಿಗಳಿಗೆ ಬಾದೆ) ನಿಯಂತ್ರಣಕ್ಕಾಗಿ ಸೈಪರ್ ಮೇಥ್ರೀನ್ 10% ಇ.ಸಿ. @ 250 ಮಿ.ಲೀ/ಎಕರೆಗೆ ಅಥವಾ ಸೈಪರ್ ಮೇಥ್ರೀನ್ 25% ಇ.ಸಿ. @ 100 ಮಿ.ಲೀ/ಎಕರೆಗೆ ಅಥವಾ ಲ್ಯಾಮ್ಡ ಸೈಹಿಲೋಥ್ರೀನ್ 5% ಇ.ಸಿ. @ 200 ಮಿ.ಲೀ/ಎಕರೆಗೆ ಅಥವಾ ಡೆಲ್ಟಾ ಮೈಥ್ರೀನ್ 2.8% ಇ.ಸಿ. @ 200 ಮಿ.ಲೀ/ಎಕರೆಗೆ, ಫೆನ್‌ಪ್ರೊಪಥ್ರಿನ್ 10% ಇ.ಸಿ @ 350 ಮಿ.ಲೀ/ಎಕರೆಗೆ ಅಥವಾ ಫೆನ್ವಾಲರೇಟ್ 20% ಇಸಿ @ 200 ಮಿ.ಲೀ/ಎಕರೆಗೆ ಅಥವಾ ಅಲ್ಫಾಸೈಪರ್‌ಮೆಥ್ರೀನ್ 10% ಇ.ಸಿ @120 ಮಿ.ಲೀ/ಎಕರೆಗೆ ಸಿಂಪಡಿಸಿ. 7–10 ದಿನಗಳ ಅಂತರದಲ್ಲಿ ಸಿಂಪರಣೆಯನ್ನು ಪುನಾರಗೊಳಿಸಿ. ಬೂದು ಶಿಲೀಂಧ್ರ ರೋಗ ಕಂಡುಬಂದಾಗ ಕ್ರೆಷೊಥಿಮ್ ಮಿಥೈಲ್ 44.3% ಎಸ್‌ಸಿ @ 10 ಮೀ.ಲಿ ಅಥವಾ (ಅಜೊಷ್ರೊಬೀನ್ 18.2% ಡಬ್ಲೊ/ಡಬ್ಲೊ +

ಡೈಫೆನೊಕೊನಜೋಲ್ 11.4 % ಡಬ್ಲ್ಯೂ/ಡಬ್ಲ್ಯೂ) ಎಸ್‌ಸಿ @ 10 ಮೀ.ಲಿ/10 ಲೀ ನೀರಿಗೆ ಬೆರೆಸಿ ಸಿಂಪಡಿಸಬೇಕು.

ರಾಯಚೂರು: ರಾಯಚೂರು ಜಿಲ್ಲೆಯಲ್ಲಿ ಮುಂಚಿತವಾಗಿ ಬಿತ್ತನೆಯಾದ ಬೆಳೆಗಳಲ್ಲಿ ಎರಡನೇ ಬಾರಿಗೆ ಹತ್ತಿ ಬಿಡಿಸಲು ಸೂಚಿಸಲಾಗಿದೆ. ತಡವಾಗಿ ಬಿತ್ತನೆಯಾದ ಬೆಳೆಗಳಲ್ಲಿ ಮೊದಲನೇ ಬಾರಿಗೆ ಹತ್ತಿ ಬಿಡಿಸಲು ಸೂಚಿಸಲಾಗಿದೆ. ರಸಹೀರುವ ಕೀಟಗಳು ಆರ್ಥಿಕ ಮಟ್ಟರೇಖೆಗಿಂತ ಹೆಚ್ಚಾದಲ್ಲಿ ನಿಯಂತ್ರಣಕ್ಕಾಗಿ ಫ್ಲುನಿಕಅಮೈಡ್ 50 ಡಬ್ಲ್ಯು.ಜಿ 80 ಗ್ರಾಂ/ಎಕರೆಗೆ ಅಥವಾ ಡೈನೆಟೊಫ್ಯೂರನ್ 20% ಎಸ್.ಜಿ 60ಗ್ರಾಂ/ಎಕರೆಗೆ ಅಥವಾ ಇಮಿಡಾಕ್ಲೊಪ್ರಿಡ್ 17.8% ಎಸ್.ಎಲ್ 60 ಮಿ.ಲೀ ಅಥವಾ ಬುಪ್ರೊಫೀಜನ್ 25 ಎಸ್.ಸಿ. 400 ಮಿ.ಲೀ/ಎಕರೆಗೆ ಸಿಂಪಡಿಸಿ. ಗುಲಾಬಿಕಾಯಿಕೊರಕದ ನಿಯಂತ್ರಣಕ್ಕಾಗಿ ಸೈಪರ್ ಮೇಥ್ರೀನ್ 10% ಇ.ಸಿ. @ 250 ಮಿ.ಲೀ/ಎಕರೆಗೆ ಅಥವಾ ಸೈಪರ್ ಮೇಥ್ರೀನ್ 25% ಇ.ಸಿ. @ 100 ಮಿ.ಲೀ/ಎಕರೆಗೆ ಅಥವಾ ಲ್ಯಾಮ್ಡ ಸೈಹಲೋಥ್ರೀನ್ 5% ಇ.ಸಿ. @ 200 ಮಿ.ಲೀ/ಎಕರೆಗೆ ಅಥವಾ ಡೆಲ್ಟಾ ಮೈಥ್ರೀನ್ 2.8% ಇ.ಸಿ. @ 200 ಮಿ.ಲೀ/ಎಕರೆಗೆ, ಫೆನ್‌ಪ್ರೊಪಥ್‌ರಿನ್ 10% ಇ.ಸಿ @ 350 ಮಿ.ಲೀ/ಎಕರೆಗೆ ಅಥವಾ ಫೆನ್ವಾಲರೇಟ್ 20% ಇಸಿ @ 200 ಮಿ.ಲೀ/ಎಕರೆಗೆ ಅಥವಾ ಅಲ್ಫಾಸೈಪರ್‌ಮೆಥ್ರೀನ್ 10% ಇ.ಸಿ @120 ಮಿ.ಲೀ/ಎಕರೆಗೆ ಸಿಂಪಡಿಸಿ.